**ಸಾಕ್ಷಿಗೆ ದಿನಾಂಕಃ 07.08.2026 ರಂದು ಪ್ರಮಾಣ ಮಾಡಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ. ಜಿ.ಆರ್.ಎಸ್. ವಕೀಲರಿಂದಃ**

2018 ರಲ್ಲಿ ಪಿರ್ಯಾದಿಯು ಚೀಟಿ ವ್ಯವಹಾರವನ್ನು ಶುರು ಮಾಡಿರುತ್ತಾರೆ. ಆಗ ನಾನು ಪಿರ್ಯಾದಿ ಬಳಿ ಮೂರು ಲಕ್ಷಕ್ಕೆ ಚೀಟಿಯನ್ನು ಹಾಕಿದ್ದೆನು. ಚೀಟಿ ವ್ಯವಹಾರವು 2022 ರಲ್ಲಿ ಮುಕ್ತಾಯವಾಗಿರುತ್ತದೆ. ಚೀಟಿಯ ಸದಸ್ಯರು ಎಷ್ಟು ಜನ ಇದ್ದರು ಎಂದು ನನಗೆ ಗೊತ್ತಿರುವುದಿಲ್ಲ. ಚೀಟಿಯಲ್ಲಿ ಪ್ರತಿ ತಿಂಗಳು ಹತ್ತು ಸಾವಿರವನ್ನು ಕಟ್ಟಬೇಕಿತ್ತು. ಒಟ್ಟು 42 ತಿಂಗಳು ಪಾವತಿ ಮಾಡಬೇಕಿತ್ತು. ಅದರಲ್ಲಿ 6-7 ಬಡ್ಡಿ ಚೀಟಿಗಳು ಇದ್ದವು. ನಾನು ಚೀಟಿಯ ಹಣವನ್ನು ರೂ.1.96,000/-ಕ್ಕೆ ಪಡೆದಿರುತ್ತೇನೆ. ಎಲ್ಲಾ ವ್ಯವಹಾರವನ್ನು ಫೋನಿನ ಮೂಲಕ ನಡೆಸುತ್ತಿದ್ದೆನು. ಬಡ್ಡಿ ಚೀಟಿಯನ್ನು ಹೊರತುಪಡಿಸಿ ಉಳಿದ 32-33 ಚೀಟಿಗಳನ್ನು ಪಾವತಿ ಮಾಡಬೇಕಿತ್ತು. ನಾನು ಪಿರ್ಯಾದಿಯ ಬಳಿ ಯಾವುದೇ ಚೀಟಿಯ ವ್ಯವಹಾರವನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ವ್ಯವಹಾರವನ್ನು ಹೊರುತುಪಡಿಸಿ ಉಳಿದ ವ್ಯವಹಾರವನ್ನು ಪಿರ್ಯಾದಿಯ ಜೊತೆ ಮಾಡಿರುವುದಿಲ್ಲ. ಪಿರ್ಯಾದಿಯು ಯಾವುದೇ ಚೀಟಿಯ ವ್ಯವಹಾರವನ್ನು ನಡೆಸುತ್ತಿರಲಿಲ್ಲ ಎಂದರೆ ಸರಿಯಲ್ಲ. ಮೇಲೆ ಹೇಳಿದ ಚೀಟಿ ವ್ಯವಹಾರವು ತಾಳೆ ಆಗದ ಕಾರಣ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ನಾನು ಹಾಜರುಪಡಿಸಿದ ದಾಖಲೆಗಳಲ್ಲಿ ನಮೂದು ಮಾಡಿರುವ ಹಣವನ್ನು ಪಿರ್ಯಾದಿಯಿಂದ ಪಡೆದ ಬೇರೆಯವರಿಗೆ ನೀಡಿದ ಹಣದ ವ್ಯವಹಾರ ಆಗಿರುತ್ತದೆ ಎಂದರೆ ಸರಿಯಲ್ಲ. ಪಿರ್ಯಾದಿಯ ಮನೆಯನ್ನು ಭೋಗ್ಯಕ್ಕೆ ಬೇರೆಯವರಿಗೆ ನಿಡಿದ್ದು, ಅದರಿಂದ ಬಂದ ಹಣವನ್ನು ಸಾಲವಾಗಿ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಪಿರ್ಯಾದಿಗೆ ಹಣವನ್ನು ಪಾವತಿ ಮಾಡಬೇಕಾಗುತ್ತದೆ ಎನ್ನುವ ಕಾರಣದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಚೀಟಿಯ ವ್ಯವಹಾರಕ್ಕೆ ಸಂಬಂಧಿಸಿದಂತೆ ಪಿರ್ಯಾದಿಯ ಬಳಿ ಯಾವುದೇ ದಾಖಲೆಯನ್ನು ಪಡೆದಿರುವುದಿಲ್ಲ.

**ಮರು ವಿಚಾರಣೆ ಇರುವುದಿಲ್ಲ.**

**(ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ.**

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**

**ಮತ್ತು ಪ್ರ.ದ.ನ್ಯಾದಂ. ತಿ.ನರಸೀಪುರ.**